**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 21.02.2025 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ.ಪಿ.ಎಸ್.ಜಿ. ವಕೀಲರಿಂದಃ**

ಕೆ.ಜಿ.ಗುರುಮಲ್ಲಪ್ಪ ನನ್ನ ತಂದೆ. ನನ್ನ ತಂದೆಯ ಜೊತೆ 4 ಜನ ಸಹೋದರರು ಇರುತ್ತಾರೆ, ಅವರ ಹೆಸರು ಸಿದ್ಧಮಲ್ಲಪ್ಪ, ಕೊಂಗಳಪ್ಪ, ಹೆತ್ತಪ್ಪ ಮತ್ತು ಶಿವಪ್ಪ. ಪ್ರತಿವಾದಿಗಳ ತಂದೆ ಹೆತ್ತಪ್ಪ ರವರು ನಮ್ಮ ಕುಟುಂಬದವರಿಗೆ ಸೇರಿದವರಲ್ಲ. ಅವರ ಕುಟುಂಬ, ನಮ್ಮ ಕುಟುಂಬ ಬೇರೆ ಬೇರೆ. ಕೆ.ಜಿ.ಗುರುಮಲ್ಲಪ್ಪ ಮತ್ತು ಅವರ ಸಹೋದರರ ನಡುವೆ 1995 ರಲ್ಲಿ ವಿಭಾಗವಾಗಿರುತ್ತದೆ. ಪ್ರತಿಯೊಬ್ಬರಿಗೂ ವಿಭಾಗದಲ್ಲಿ 6 ಎಕರೆ ಬಂದಿರುತ್ತದೆ. ದಾವಾ ಆಸ್ತಿ ಮೂಲತಃ ಸರ್ಕಾರಕ್ಕೆ ಸೇರಿದ ಆಸ್ತಿ ಎಂದರೆ ಸರಿ. ಸ.ನಂ. 52 ರಲ್ಲಿ ಕೆ.ಜಿ.ಗುರುಮಲ್ಲಪ್ಪನವರು ವ್ಯವಸಾಯ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ಮಂಜೂರಾತಿ ಪತ್ರ ಮತ್ತು ಸರ್ಕಾರಕ್ಕೆ ಕಂತಿಕೆ ಕಟ್ಟಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಸ.ನಂ. 52 ರ ಆಸ್ತಿಯು ಸ.ನಂ.127 ರಂದು 1985 ರಲ್ಲಿ ದುರಸ್ತಿಯಾಗಿತ್ತು. ದಿ. 10.03.1977 ರಲ್ಲಿ 3 ಎಕರೆ 37 ಗುಂಟೆ ಸ.ನಂ.52 ರಲ್ಲಿ ಹೆತ್ತಪ್ಪನವರಿಗೆ ಮಂಜೂರು ಆಗಿತ್ತು, ಮತ್ತು ಮಂಜೂರು ಆದ ನಂತರ ಅವರಿಗೆ ಖಾತೆ ಬದಲಾವಣೆಯಾಗಿತ್ತು ಎಂದರೆ ಸರಿಯಲ್ಲ. ಸ.ನಂ.52 ದುರಸ್ತಿಯಾದ ನಂತರ ಹೆತ್ತಪ್ಪನವರಿಗೆ ಮಂಜೂರಾಗಿರುವ ಆಸ್ತಿ ಸ.ನಂ.127 ಎಂದು ಆಗಿದೆ ಎಂದರೆ ಸರಿ. ದುರಸ್ತಿಯಾದ ನಂತರ ಹೆತ್ತಪ್ಪನವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ವಿಭಾಗ ಪತ್ರವನ್ನು ತಹಶೀಲ್ದಾರರು ಮತ್ತು ಗ್ರಾಮಸ್ಥರ ಕ್ರಮಕ್ಷಮ ಶ್ರೀನಿವಾಸ ಎಂಬುವವರು ಬರೆದಿರುತ್ತಾರೆ. ವಿಭಾಗ ಪತ್ರಕ್ಕೆ ಛಾಪ ಕಾಗದವನ್ನು ನಾಗಪ್ಪನವರು ಖರೀದಿ ಮಾಡಿರುತ್ತಾರೆ. ದಿಃ20.11.1985 ರಂದು ಹೆತ್ತಪ್ಪನವರು ಜೀವಂತವಾಗಿದ್ದರು. ಮೊದಲನೇ ಪುಟದಲ್ಲಿ ತಿದ್ದುಪಡಿ ಮಾಡಿ ಗುರುಮಲ್ಲಪ್ಪ ಎಂದು ಬರೆದಿದ್ದು ಮತ್ತು 2ನೇ ಪುಟದಲ್ಲಿ ಕೂಡ ಗುರುಮಲ್ಲಪ್ಪ ಎಂದು ತಿದ್ದುಪಡಿ ಮಾಡಿ ಬರೆಯಲಾಗಿದೆ ಎಂದರೆ ಸರಿ. ವಿಭಾಗವಾದಗ ಟಿ.ಕೆ.ಸುಬ್ಬಯ್ಯ ಎಂಬ ತಹಶೀಲ್ದಾರರ ಹಾಜರು ಇದ್ದರು. ವಿಭಾಗ ಪತ್ರ ತಯಾರು ಮಾಡಿದ ದಿನದಂದೆ ತಹಶೀಲ್ದಾರರು ಸಹಿ ಮಾಡಿರುತ್ತಾರೆ. ನಾವು ತಹಶೀಲ್ದಾರರವರ ಸಹಿಯ ಸುಳ್ಳು ಸೃಷ್ಟನೆ ಮಾಡಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಿಭಾಗ ಪತ್ರವನ್ನು ಗುಂಡ್ಲುಪೇಟೆಯಲ್ಲಿ ತಯಾರು ಮಾಡಿರುತ್ತಾರೆ. ವಿಭಾಗ ಪತ್ರದಲ್ಲಿ ಪಂಚ ಸಾಕ್ಷಿಧಾರರು ವಿಳಾಸ ಮತ್ತು ಇತರೆ ವಿವರಗಳು ಇಲ್ಲ ಎಂದರೆ ಸರಿ. ವಿಭಾಗ ಪತ್ರವನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿ ಹಾಜರು ಮಾಡಿರುತ್ತೇನೆ ಹಾಗೂ ಹೆತ್ತಪ್ಪನವರು ವಿಭಾಗ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸವಿಭಾಗ ಪತ್ರದಲ್ಲಿರುವ ಹೆಬ್ಬೆಟ್ಟು ಗುರುತು ಹೆತ್ತಪ್ಪನವರದಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವುದರಿಂದ 2010 ರಲ್ಲಿ ಪ್ರತಿವಾದಿಗಳ ತಂದೆ ರೆವಿನ್ಯೂ ನ್ಯಾಯಾಲಯದಲ್ಲಿ ಅಪಿಲು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ರೆವಿನ್ಯೂ ನ್ಯಾಯಾಲಯದಲ್ಲಿ ಪ್ರತಿವಾದಿಗಳ ಪರ ಆದೇಶವಾಗಿತ್ತು ಎಂದರೆ ಸರಿ. ಸದರಿ ಆದೇಶವನ್ನು ಪ್ರಶ್ನಿಸಿ ಅಪಿಲು ಸಂಖ್ಯೆ 58/15-16 ಮೇಲ್ಮನವಿ ಸಲ್ಲಿಸಿತು ಎಂದರೆ ಸರಿ. ಮತ್ತು ಸದರಿ ಅಪಿಲು ವಜಾ

ಆಗಿರುತ್ತದೆ ಎಂದರೆ ಸರಿ. ಸ.ನಂ.127 ರಲ್ಲಿ 3 ಎಕರೆ 37 ಗುಂಟೆಯಲ್ಲಿ ಹೆತ್ತಪ್ಪನವರು ತಿರಿಕೊಂಡ ನಂತರ ಅವರ ಮಗ ನಾಗಪ್ಪನವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾಗಪ್ಪನವರೆ ನೀರಾವರಿ ವ್ಯವಸ್ಥೆ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಸ.ನಂ.127 ರಲ್ಲಿ 3 ಎಕರೆ 37 ಗುಂಟೆ ಆಸ್ತಿಯನ್ನು ಹೆತ್ತಪ್ಪನವರಿಗೆ ಅವರ ಮಗನಿಗೆ ದಿಃ 29.04.2017 ರಂದು ದಾನಪತ್ರ ಕೊಟ್ಟಿರುತ್ತಾರೆ ಎಂದರೆ ಸರಿ. ಆದ್ದರಿಂದ 2ನೇ ಪ್ರತಿವಾದಿ ದಾವಾ ಆಸ್ತಿಯ ಮಾಲೀಕರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗಾಗಲೀ, ನನ್ನ ತಂದೆಗಾಗಲೀ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಿಃ 28.12.2022 ರಂದು ಪ್ರತಿವಾದಿಗಳು ಗಲಾಟೆ ಮಾಡಿದಾಗ ನಾನು ಪೀರ್ಯಾದು ನೀಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೆ ತೊಂದರೆ ಇಲ್ಲ. ಪ್ರತಿವಾದಿಗಳೆ ಸ್ವಾಧೀನದಲ್ಲಿ ಇರುವುದರಿಂದ ವಾದಿಗೆ ತೊಂದರೆ ಕೊಡುವ ಪ್ರಶ್ನೆಯೆ ಬರುವುದಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಆಸ್ತಿಯನ್ನು ಅಕ್ರಮ ಮಾಡಲು ಪ್ರತಿವಾದಿಗಳ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ